ದಿ:**13.03.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲು:- ಆರೋಪಿ ಪರ N.R.T., ವಕೀಲರಿಂದ:-

ನಮ್ಮ ಗ್ರಾಮ ಕೆಳಗೋಟೆ ಇರುತ್ತದೆ ಎಂದರೆ ಸರಿ. ನಾನು ಆರೋಪಿಗೆ ನೀಡಿದೆ ಎಂದು ಹೇಳುವ ಹಣವನ್ನು ದಿ: 21.11.2023 ರಂದು 7 ಲಕ್ಷದ 50 ಸಾವಿರ ಹಣವನ್ನು ನೀಡಿರುತ್ತೇನೆ . ಆರೋಪಿಯು ನನಗೆ ಹಣ ನೀಡಿದಾಗ ಬಳ್ಳಾರಿಯ ಖಾಸಗಿ ಬ್ಯಾಂಕಿನ ಹೋಸಪೇಟೆ ಬ್ರಾಂಚ್ ನ ಚೆಕ್ ಅನ್ನುನೀಡಿರುತ್ತೇನೆ . ನಾನು ಆರೋಪಿಗೆ ನೀಡಿದೆ ಎಂದು ಹೇಳುವ ಹಣವನ್ನು ಜಗಳೂರಿನಲ್ಲಿ ನಾನು ಕೆಲಸ ಮಾಡುವ ಮಂಜುನಾಥ್ ಎಂಟರಪ್ರೆಸಸ್ ಕಛೇರಿಯಲ್ಲಿ ನೀಡಿರುತ್ತೇನೆ . ನಾನು ಸದರಿ ಕಂಪನಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತೇನೆ . ಸದರಿ ಕಛೇರಿಯು ಜಗಳೂರಿನ ಬಿದರಕೆರೆ ರಸ್ತೆಯಲ್ಲಿ ಇರುತ್ತದೆ . ನಾನು ಸದರಿ ಕಂಪನಿಯಲ್ಲಿ ಕೆಲಸ ಮಾಡುವ ಬಗ್ಗೆ ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ . ನಾವು ಮನೆಯಲ್ಲಿ ಒಟ್ಟು 4 ಜನ ಇರುತ್ತೇವೆ . ನನಗೆ ಸದರಿ ಮಂಜುನಾಥ್ ಎಂಟರಪ್ರೆಸಸ್ ಕಂಪನಿ ಮೂಲಕ ತಿಂಗಳಿಗೆ 40 ಸಾವಿರ ಸಂಬಂಳ ಬರುತ್ತದೆ . ಸದರಿ ಮಂಜುನಾಥ್ ಎಂಟರಪ್ರೆಸಸ್ ಮಾಲೀಕರು ಮಂಜುನಾಥ ಇ ವಿ , ಜ್ಯೋತಿಪುರ ಗ್ರಾಮದವರು ಇರುತ್ತಾರೆ . ನಮ್ಮ ಮನೆಯಲ್ಲಿ ನಾನು , ನಮ್ಮ ತಂದೆ ತಾಯಿ ನಮ್ಮ ತಂಗಿ ಇರುತ್ತಾರೆ . ನನ್ನ ತಂಗಿಗೆ ಸನ್ 2017 ರಲ್ಲಿ ಮದುವೆ ಆಗಿರುತ್ತದೆ . ನಮ್ಮ ತಂದೆಗೆ ಈಗ 55 ವರ್ಷ ತಾಯಿಗೆ 50 ವರ್ಷ ವಯಸ್ಸು ಆಗಿರುತ್ತದೆ . ನನಗೆ ಸಂಬಂದಿಸಿದ ಜಮೀನು ಕೆಳಗೋಟೆ ಗ್ರಾಮದಲ್ಲಿ 1 ಎಕರೆ 20 ಗುಂಟೆ ಇರುತ್ತದೆ . ಅದಕ್ಕೆ ಸಂಬಂದಿಸಿದ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ . ನಾನು ಮಂಜುನಾಥ್ ಎಂಟರಪ್ರೆಸಸ್ ನಲ್ಲಿ ಕೆಲಸ ಮಾಡುವ ಬಗ್ಗೆ ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ . ಸದರಿ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸಾಕ್ಷಿ ಮುಂದುವರೆಸಿ ಅವಶ್ಯಕತೆ ಇರುವುದಿಲ್ಲ ಎಂದು ದಾಖಲೆ ಸಲ್ಲಿಸಿರುವುದಿಲ್ಲ ಎಂದು ಹೇಳುತ್ತಾರೆ . ನನಗೆ ಮಂಜುನಾಥ್ ಎಂಟರಪ್ರೆಸಸ್ ನವರು 40 ಸಾವಿರ ಹಣವನ್ನು ನಗದು ಮೂಲಕ ಸಂಬಳವಾಗಿ ತಿಂಗಳಿಗೆ ನೀಡುತ್ತಾರೆ . ನಮ್ಮ ಮನೆಯ ಖರ್ಚು ತಿಂಗಳಿಗೆ 15 ಸಾವಿರ ಇರುತ್ತದೆ . ನಮ್ಮ ತಂಗಿ ಮದುವೆಗೆ 15 ಲಕ್ಷ ಖರ್ಚು ಇರುತ್ತದೆ . ಸದರಿ ಖರ್ಚು ಅನ್ನು ನಾವು ಜಮೀನು ಮಾರಾಟ ಮಾಡಿ ಭರಿಸಿರುತ್ತೇನೆ . ನಾವು ವರ್ಷದಲ್ಲಿ ಯುಗಾದಿ ಮತ್ತು ದೀಪಾವಳಿ ಆಚರಿಸುತ್ತೇವೆ . ಆ ಸಮಯಕ್ಕೆ ನಾವು 20

ಸಾವಿರ ಹಣ ಖರ್ಚು ಮಾಡುತ್ತೇವೆ . ಕೊಡದಗುಡ್ಡ ಜಾತ್ರೆ ಸಮಯದಲ್ಲಿ ನಾವು ಹಿರಿಯರ ಪೂಜೆ ಮಾಡುತ್ತೇವೆ ಎಂದರೆ ಸರಿ. ಸದರಿ ಪೂಜೆಗಾಗಿ ನಮಗೆ ಸಾಕಷ್ಟು ಖರ್ಚು ಇರುತ್ತದೆ ಎಂದರೆ ಸರಿಯಲ್ಲ. ಆರೋಪಿ ಊರು ಸೂಲದಹಳ್ಳಿ ಇರುತ್ತದೆ . ಆರೋಪಿಯ ಕುಟುಂಬದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ . ಅವರಿಗೆ ಇಬ್ಬರು ಮಕ್ಕಳು ಮಾತ್ರ ಇರುವ ಬಗ್ಗೆ ಗೊತ್ತಿರುತ್ತದೆ . ಆರೋಪಿ ತಿಪ್ಪೇಸ್ವಾಮಿ ಅವರ ತಮ್ಮ ರುದ್ರಮುನಿ ನಾನು ಕೆಲಸ ಮಾಡುವ ಮಂಜುನಾಥ್ ಎಂಟರಪ್ರೆಸಸ್ ನಲ್ಲಿ ನನ್ನ ಸಹೋದ್ಯೋಗಿ ಆಗಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಅವರ ತಮ್ಮ ರುದ್ರಮುನಿ ಊರು ಮುಷ್ಟೂರು ಗ್ರಾಮ ಇರುತ್ತೆ ಎಂದರೆ ಸರಿ. ನಾನು ಆರೋಪಿಗೆ ನೀಡಿದೆ ಎಂದು ಹೇಳುವ 7.5 ಲಕ್ಷ ಹಣವನ್ನು ನೀಡುವಾಗ ನಾನು ಮತ್ತು ಆರೋಪಿ ಮಾತ್ರ ಇದ್ದೇವು . ಆರೋಪಿಗೆ ನಾನು ಹಣ ನೀಡಿದೆ ಎಂದು ಹೇಳುವ ಯಾವ ದಿನ ಎಂದು ನನಗೆ ನೆನಪಿರುವುದಿಲ್ಲ . ಆಗ ಸಮಯ ಸಂಜೆ 6.00 ಗಂಟೆ ಆಗಿರುತ್ತದೆ . ನಾನು ಕೆಲಸ ಮಾಡುವ ಮಂಜುನಾಥ್ ಎಂಟರಪ್ರೆಸಸ್ ಕಛೇರಿಯು ದಿನದಲ್ಲಿ 20 ಗಂಟೆಯು ತೆರೆದಿರುತ್ತದೆ . ನಮ್ಮ ಮಂಜುನಾಥ್ ಎಂಟರಪ್ರೆಸಸ್ ನಲ್ಲಿ ಕೆಲಗಾರರಿಗೆ ಪಿ ಎಂ ಮತ್ತು ವಿಮೆ ನಮ್ಮ ಸಂಬಂಳದಲ್ಲಿ ತಗೆಯುತ್ತಾರೆ ಎಂದರೆ ಸರಿ. ಆರೋಪಿ ತಿಪ್ಪೇಸ್ವಾಮಿ ಅವರ ಮಕ್ಕಳ ವಯಸ್ಸು ನನಗೆ ಗೊತ್ತಿರುವುದಿಲ್ಲ . ನಾನು ಆರೋಪಿಗೆ ನೀಡಿದೆ ಎಂದು ಹೇಳುವ 7.5 ಲಕ್ಷವನ್ನು ಯಾವ ಮುಖ ಬೆಲೆಯ ನೋಟುಗಳನ್ನು ನೀಡಿರುತ್ತೀರ ಎಂದರೆ ಸಾಕ್ಷಿ ನಾನು 21.11.2023 ರಂದು 5 ಲಕ್ಷ ಹಣವನ್ನು 500 ಮುಖ ಬೆಲೆಯ 1000 ನೋಟುಗಳನ್ನು ನೀಡಿರುತ್ತೇನೆ . ಸದರಿ ದಿನಾಂಕ ಒಂದು ತಿಂಗಳ ಹಿಂದೆ ದಿಃ 15.10.2023 ರಂದು 1.5 ಲಕ್ಷವನ್ನು ನಗದಿನ ಮೂಲಕ 500 ಮುಖಬೆಲೆಯ 300 ನೋಟುಗಳನ್ನು ನೀಡಿರುತ್ತೇನೆ . ಸದರಿ 1.5 ಹಣವನ್ನು ದಿಃ 15.10.2023 ರಂದು ಜಗಳೂರಿನ ಚಳ್ಳಕೆರೆ ರಸ್ತೆಯಲ್ಲಿರುವ ವಿನಾಯಕ ಪೆಟ್ರೋಲ್ ಬಂಕ್ ಬಳಿ ನೀಡಿರುತ್ತೇನೆ . ಆರೋಪಿ ನನಗೆ ತಮ್ಮಯ ಅವಶ್ಯಕತೆಗೆ ಸಾಲ ಕೇಳಿರುತ್ತಾನೆ . ನಾನು ಕೆಲಸ ಮಾಡುವ ಮಂಜುನಾಥ್ ಎಂಟರಪ್ರೆಸಸ್ ಗೆ ಸಂಬಂದಿಸಿದ 3 ಲಾರಿ ಇರುತ್ತವೆ ಎಂದರೆ ಸಾಕ್ಷಿ 2 ಲಾರಿ ಇರುತ್ತವೆ . ಸದರಿ ಲಾರಿಗಳ ಸಂಖ್ಯೆ KA-17-D-8058 ಮತ್ತು KA-35-B-8037 ಇರುತ್ತದೆ . ಮಂಜುನಾಥ್ ಎಂಟರಪ್ರೆಸಸ್ ನಲ್ಲಿ ಲಾರಿ ಟ್ರಾನ್ಸ್‌ಪೋರ್ಟ್ ಕೆಲಸ ಮಾಡುತ್ತೇವೆ . ನಾನು ಸದರಿ ಮಂಜುನಾಥ್ ಎಂಟರಪ್ರೆಸಸ್ ನಲ್ಲಿ ಸನ್ ಜೂನ್

2019 ರಿಂದ ಕೆಲಸ ಮಾಡುತ್ತಿದ್ದೇನೆ . ನಾವು ಚಂಡೂಹೂವನ್ನು ಸದರಿ ಲಾರಿಗಳಲ್ಲಿ ತಿಪಟೂರು ಮತ್ತು ಗುಂಡ್ಲುಪೇಟೆ , ತಮಿಳುನಾಡು , ಹಾಸನ ಮತ್ತು ಹಿರಿಯೂರು ಕಡೆ ಸರಬರಾಜು ಮಾಡುತ್ತೇವೆ . ಸದರಿ ಚಂಡೂ ಹೂವು ಅನ್ನು AVT NATURAL PRODUCTS ಎಂಬುವ ಕಂಪನಿಗೆ OMINI ACTIVE PVT. LTD, ಹಾಸನ , PJ MARGO ಹಿರಿಯೂರು ಇವರಿಗೆ ಸರಬರಾಜು ಮಾಡುತ್ತೇವೆ . ನಾವು ನಮ್ಮ ಲಾರಿಗಳನ್ನು ರೈತರ ಹೋಲಗಳಿಗೆ ಕಳುಹಿಸಿ ಸದರಿ ಚಂಡೂ ಹೂವು ಪಡೊಕೊಳ್ಳುತ್ತೇವೆ . ನಮಗೂ ಮತ್ತು ರೈತರಿಗೆ ನೇರ ಸಂಪರ್ಕ ಇರುವುದಿಲ್ಲ ಎಂದರೆ ಸರಿ. ನಾನು ಈ ಪಿರ್ಯಾದಿ ಮತ್ತು ಮುಖ್ಯವಿಚಾರಣೆಯಲ್ಲಿ ದಿಃ 21.11.2023 ರಲ್ಲಿಯೇ 7.5 ಲಕ್ಷ ಹಣವನ್ನು ಆರೋಪಿಗೆ ನೀಡಿರುವುದಾಗಿ ನಮೂದು ಮಾಡಿರುತ್ತೇನೆ ಎಂದರೆ ಸರಿ. ನಾನು ಮತ್ತು ಜ್ಯೋತಿಪುರ ಮಂಜು ತಂದೆ ವೆಂಕಟಸ್ವಾಮಿ ಅವರು ತುಂಬಾ ವಿಶ್ವಾಸಿಗರು ಇರುತ್ತೇವೆ ಎಂದರೆ ಸರಿ.

( ಈ ಹಂತದಲ್ಲಿ ಪಿರ್ಯಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಆಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು